ಬದುಕು ಮತ್ತೆ ಬೀದಿಗೆ ಬೀಳುತ್ತೋ ಏನೋ?!..." ಇಷ್ಟು ಹೇಳುವ ವೇಳೆಗೆ ದುರ್ಗಳ ಕಣ್ಣಲ್ಲಿ ನೀರಾಡುತ್ತಿತ್ತು.

ದುರ್ಗಳ ಮಾತನ್ನು ಕೇಳಿ ಸತ್ಯವತಿಯ ಹೃದಯವೂ ದ್ರವಿಸಿತ್ತು. ಅವಳಿಗೇ ತಿಳಿಯದಂತೆ ಅವಳ ಕಣ್ಣುಗಳೂ ತೇವಗೊಂಡಿದ್ದವು.

"ಅಮ್ಮನವರಿಗೆ ಕಿಡ್ನಿ ಕೊಟ್ರೆ ಬದುಕ್ತಾರಾ?" ಅಮಾಯಕಳಂತೆ ಕೇಳಿದಳು ಸತ್ಯವತಿ.

"ಅದು ನಮ್ಮೆಲ್ಲರ ಅದೃಷ್ಟವನ್ನು ಅವಲಂಬಿಸಿದೆ. ಅಮ್ಮನವರಿಗೆ ಏನಾದರೂ ಆದರೆ ತಂದೆಯವರು ಹಿಂದಿನಂತೆ ಸೇವಾ ಕಾರ್ಯಗಳನ್ನು ಮುಂದುವರೆಸೋದು ಕಷ್ಟವಾಗುತ್ತೆ. ಒಂದುಕಡೆ ಅಮ್ಮನವರ ಅನಾರೋಗ್ಯ, ಮತ್ತೊಂದುಕಡೆ ಆಶ್ರಮವಾಸಿಗಳನ್ನು ನೋಡಿಕೊಳ್ಳೋಕೆ ತುಂಬಾ ಶ್ರಮಪಡ್ತಿದಾರೆ. ಅವರು ಹೊಟ್ಟೆ ತುಂಬ ತಿಂದು, ಕಣ್ಣು ತುಂಬ ನಿದ್ದೆಮಾಡಿ ಯಾವ ಕಾಲವಾಯ್ತೋ? ನಾವಿಷ್ಟು ಜನ ಇದೀವಿ... ನಾವು ಕಿಡ್ನಿ ಕೊಡ್ತೀವಿ ಅಂದ್ರೆ ಅಪ್ಪ ಅಮ್ಮ ಒಪ್ಪಿಕೊಳ್ತಿಲ್ಲ. 'ಈ ಕೈಗಳಿಂದ ನೆಟ್ಟ ಸಸಿಗಳನ್ನು ಇದೇ ಕೈಗಳಿಂದ ಕಡಿಯೋದಿಕ್ಕೆ ಸಾಧ್ಯವಿಲ್ಲ. ನಿಮ್ಮಿಂದ ಕಿಡ್ನಿ ತಗೊಂಡ್ರೆ ನಾವು ಮಾಡ್ತಿರೋ ಕೆಲಸ ಸ್ವಾರ್ಥದಿಂದ ಕೂಡಿದ್ದಾಗುತ್ತೆ.' ಅಂತಾರೆ ತಂದೆಯವರು." ಮುಂದೆ ಮಾತನಾಡಲಾಗದೆ ಮುಖ ತಿರುಗಿಸಿಕೊಂಡು ಕಣ್ಣು ಒರೆಸಿಕೊಳ್ಳುತ್ತಾ ಅಡಿಗೆಮನೆಗೆ ಹೊರಟುಹೋದಳು.

ಹಿಂದಿನ ರಾತ್ರಿ ಸರಿಯಾಗಿ ನಿದ್ದೆ ಇಲ್ಲದಿದ್ದುದರಿಂದ ಸತ್ಯವತಿಗೆ ಒಳ್ಳೆಯ ನಿದ್ದೆ ಬಂದಿತ್ತು. ಮಧ್ಯದಲ್ಲಿ ದುರ್ಗ ಬಂದು ಎಬ್ಬಿಸಿದಾಗ ಎದ್ದು ಊಟ ಮಾಡಿ ಮತ್ತೆ ಮಲಗಿಬಿಟ್ಟಳು.

ಸಂಜೆಯ ಸಮಯ.

"ಮಾಧವರಾಯರು ಬಂದಿದ್ದಾರೆ ಏಳಕ್ಕ..." ಎಂದು ದುರ್ಗ ಬಂದು ಎಬ್ಬಿಸಿದಾಗ ಎದ್ದು ಮುಖ ತೊಳೆದುಕೊಂಡು ಹಾಲಿಗೆ ಬಂದಳು.

"ಕೂತ್ಕೊ ಬಾಮ್ಮಾ... ನಿನ್ನ ಹತ್ತಿರ ಎರಡು ನಿಮಿಷ ಮಾತನಾಡೋದಿದೆ..." ಎಂದರು ಮಾಧವರಾಯರು.

ಕೆಳಗೆ ಕುಳಿತುಕೊಳ್ಳಲಿದ್ದ ಅವಳನ್ನು,

"ಮೇಲೆ ಕುರ್ಚೀಲಿ ಕೂತ್ಕೋಮ್ಮ..." ಎಂದರು.

"ಪರವಾಗಿಲ್ಲ ಅಯ್ಯಾ..."

"ಮೊದಲು ಕುರ್ಚೀಲಿ ಕುತ್ಕೋ... ಹೇಳ್ತಿದೀನಲ್ಲಾ..."

ಸತ್ಯವತಿ ಕುರ್ಚಿಯಲ್ಲಿ ಕುಳಿತಳು.

"ಕಿಡ್ನಿ ಯಾಕೆ ಕೊಡಬೇಕು ಅಂದ್ಕೊಂಡೆ..." ನೇರವಾಗಿ ಕೇಳಿದರು ರಾಯರು.

ಸತ್ಯವತಿ ಉತ್ತರಿಸಲು ತಡವರಿಸಿದಳು.

"ಆರ್ಥಿಕ ಸಮಸ್ಯೆಗಳು!... ಹೌದಾ?... ಗಂಡನಿಗೆ ಔಷಧೋಪಚಾರಕ್ಕೆ ಅವಕಾಶವಿದ್ರೂ, ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಇಲ್ಲದಿದ್ರೂ, ಅತ್ತೆ ಮಾವಂದಿರನ್ನು ನೋಡಿಕೊಳ್ಳುವವರಿದ್ದರೂ, ಸಾಲ ಸಂಪೂರ್ಣವಾಗಿ ತೀರಿಹೋಗಿ, ನಿಮ್ಮ ಕುಟುಂಬದ ಊಟೋಪಚಾರಕ್ಕೆ ತೊಂದರೆ ಇಲ್ದೇ ಇದ್ರೂ... ನೀನು ಕಿಡ್ನಿ ಕೊಡೋದಕ್ಕೆ ಸಿದ್ಧವಾಗಿದೀಯಾ?..."

'ಓ!... ಸುಬ್ಬಯ್ಯ ನಮ್ಮ ಮನೆ ವಿಷಯ ಎಲ್ಲ ಇವರಿಗೆ ಹೇಳ್ಬಿಟ್ಟಿದಾನೆ...' ಅಂದುಕೊಂಡಳು ಸತ್ಯವತಿ.

"ಯಾಕೆ, ಕೊಡ್ತೀನಿ ಅಯ್ಯಾ..." ಅವನ ಮಾತುಗಳನ್ನು ಒಪ್ಪಿಕೊಳ್ಳುತ್ತಾ ಹೇಳಿದಳು.

"ಅಂದರೆ, ನಿನ್ನ ಹಣಕಾಸಿಗೆ ಸಂಬಂಧಿಸಿದ ಸಮಸ್ಯೆಗಳನ್ನು, ನಾನು ನನ್ನ ಹೆಂಡತಿಗೋಸ್ಕರ, ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುವುದು ದಾರುಣ ಸಂಗತಿ ಅಲ್ಲವೆ? ಇದು ಮಾನವೀಯತೆ